**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ**

**ನ್ಯಾಯಿಕ ದಂಡಧಿಕಾರಿಗಳ ನ್ಯಾಯಾಲಯ, ಕುಷ್ಟಗಿ**

**ಸಿ ಸಿ ಸಂಖ್ಯೆಃ 246/2017** **ಸಿಡಬ್ಲ್ಯೂ ಃ 4**

**ಪಿಡಬ್ಲ್ಯೂ ಃ 2**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | **ಅಮರೇಶ** |
| **ತಂದೆಯ ಹೆಸರು** | ಃ | **ಬಸಲಿಂಗಪ್ಪ ಹುಬ್ಬಳ್ಳಿ** |
| **ವಯಸ್ಸು** | ಃ | **43 ವರ್ಷ** |
| **ಉದ್ಯೋಗ** | ಃ | **ಮುಖ್ಯಪೇದೆ** |
| **ವಾಸ** | ಃ | **ಕುಷ್ಟಗಿ** |

**ದಿನಾಂಕಃ 14.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

1. ನಾನು ದಿನಾಂಕಃ 15.07.2014 ರಿಂದ ಕುಷ್ಟಗಿ ಪೊಲೀಸ್ ಠಾಣೆಯಲ್ಲಿ ಕಾನಸ್ಟೆಬಲ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಮತ್ತು ಚಾಸಾ 5 ದಿನಾಂಕಃ 10.02.2017 ರಂದು ರಾತ್ರಿ ಗುಡ್ ಮಾರ್ನಿಂಗ್ ಬೀಟ್ ಕರ್ತವ್ಯ ನಿರ್ವಹಿಸುತ್ತಿದ್ದು, ಬೆಳಗಿನ ಜಾವ 04.00 ಗಂಟೆಗೆ ಚಾಸಾ 1 ರವರು ಅವರ ಸಂಗಡ ನಮ್ಮನ್ನು ಕರೆದುಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾಗ 04.30 ಗಂಟೆಗೆ ಕುಷ್ಟಗಿ ಪಟ್ಟಣದ ಕನಕದಾಸ ಸರ್ಕಲ್ ಹತ್ತಿರ ಎಸ್ ಬಿ ಎಮ್ ಬ್ಯಾಂಕ್ ಹತ್ತಿರ ಹೋಗುತ್ತಿದ್ದಾಗ ಯಾರೋ ನಮ್ಮನ್ನು ನೋಡಿ ತಮ್ಮ ಇರುವಿಕೆಯನ್ನು ಮರೆಮಾಚುವುದನ್ನು ನೋಡಿ ನಾವು ಅವರ ಹತ್ತಿರ ಹೋಗಿ ನೋಡಲಾಗಿ ಗೋಡೆಯ ಪಕ್ಕಕ್ಕೆ ಅವರು ಮರೆಮಾಚಿ ತಮ್ಮ ಶರ್ಟನಿಂದ ಮುಖ ಮುಚ್ಚಿಕೊಂಡು ಮಲಗುವಂತೆ ನಾಟಕ ಮಾಡಿರುತ್ತಾರೆ. ನಾವು ಹತ್ತಿರ ನೋಡಿದಾಗ ಒಂದು ಕಬ್ಬಿಣದ ರಾಡು, ಖಾಲಿ ಚೀಲದಲ್ಲಿ ಕಾರದ ಪುಡಿ ಇತ್ತು. ಚಾಸಾ 1 ರವರು ಅವರನ್ನು ವಿಚಾರಣೆ ಮಾಡಲಾಗಿ

ಅವರ ಹೆಸರು ಮತ್ತು ವಿಳಾಸವನ್ನು ಅಪರಾ ತಪರಾ ಹೇಳಿರುತ್ತಾರೆ. ನಂತರ ಪುನಃ ಪುನಃ ವಿಚಾರಿಸಿದಾಗ ಅದರಲ್ಲಿ ಒಬ್ಬನು ವೀರಪ್ಪ ತಂದೆ ಬಾಲಪ್ಪ ತಾಳಿಕೋಟಿ ಸಾಃ ಗದಗ ಎಂದು, ಇನ್ನೊಬ್ಬ ದುರಗಪ್ಪ ತಂದೆ ಗಂಗಪ್ಪ ಕುಂಚಿಕೋರ ಸಾಃ ಯಲಬುರ್ಗಾ ಎಂದು ತಿಳಿಸಿರುತ್ತಾನೆ ಹಾಗೂ ಇನ್ನೊಬ್ಬ ಫಕೀರಪ್ಪ ತಂದೆ ಭೀಮಪ್ಪ ತಾಳಿಕೋಟೆ ಸಾಃ ಗದಗ ಎಂದು ತಿಳಿಸಿರುತ್ತಾನೆ. ಅವರ ಹತ್ತಿರ ಒಂದು ರಾಡು, ಕಾರದ ಪುಡಿ, ಒಂದು ಸ್ಪ್ಲೆಂಡರ್ ಪ್ರೊ ನಂಬರ ಪ್ಲೇಟ ಇಲ್ಲದ ಬೈಕ ಇತ್ತು. ಸರಿಯಾದ ವಿಳಾಸ ಹೇಳದೆ ಮತ್ತು ರಾತ್ರಿ ಅಪರಾಧ ಮಾಡುವ ಸಾಧ್ಯತೆ ಇರುವುದರಿಂದ ಅವರನ್ನು ಠಾಣೆಗೆ ಕರೆದುಕೊಂಡು ಹೋಗಿ ಚಾಸಾ 7 ರವರಿಗೆ ಆರೋಪಿ, ಕಬ್ಬಿಣದ ರಾಡು, ಖಾರದಪುಡಿ, ಬೈಕನ್ನು ಒಪ್ಪಿಸಿ ಹೇಳಿ ಕೊಟ್ಟಿರುತ್ತೇನೆ.

3. ಸಾಕ್ಷಿಯು ಕಬ್ಬಿಣದ ರಾಡನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 1 ಎಂದು, ಪ್ಲಾಸ್ಟಿಕ ಕವರನಲ್ಲಿ ಇರುವ ಖಾರದ ಪುಡಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 3 ನೇ ಆರೋಪಿತರ ಪರ ಶ್ರೀ ಬಿ ಡಿ ಎ ವಕೀಲರಿಂದಃ**

4. ಚಾಸಾ 1 ರವರ ಜೊತೆ ದಿನಾಂಕ 09.02.2017 ರಂದು ರಾತ್ರಿ ಯಾರು ಕರ್ತವ್ಯದಲ್ಲಿ ಇದ್ದರು ಎಂದರೆ ಚಾಲಕ ಶಿವುಕುಮಾರ ಎಪಿಸಿ 38 ಇದ್ದರು. ದಿನಾಂಕ 10.02.2017 ರಂದು ರಾತ್ರಿ 01.00 ಗಂಟೆಗೆ ನಾನು ಠಾಣೆಗೆ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಪಿ ಎಸ್ ಐ ಅವರು ಎಲ್ಲೆಲ್ಲಿ ಗಸ್ತು ಮಾಡುತ್ತಾರೆ ಎಂದು ಠಾಣಾಧಿಕಾರಿಗೆ ತಿಳಿಸಿರುತ್ತಾರೆ. ರಾತ್ರಿ 01.00 ಗಂಟೆಗೆ ಠಾಣಾಧಿಕಾರಿ ಆಗಿ ಚಾಸಾ 7 ರವರು ಇದ್ದರು. ರಾತ್ರಿ 01.00 ಗಂಟೆಗೆ ಗಸ್ತಿಗೆ ಹೋಗಿರುತ್ತೇನೆ. ಬಿಬಿ ನಗರ, ವಿದ್ಯಾನಗರ, ಅಂಬೇಡ್ಕರ ನಗರ, ಎನ್ ಹೆಚ್ ಕ್ರಾಸ್ ಮತ್ತು ಮಾರುತಿ ಸರ್ಕಲ್ ಗಸ್ತು ಮಾಡಿರುತ್ತೇವೆ. ಯಾವ ಯಾವ ನಗರದಲ್ಲಿ ಎಷ್ಟು ಎಷ್ಟು ತಾಸು ಗಸ್ತು ಮಾಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ.

5. ಚಾಸಾ 1 ರವರು ಮೊದಲ ಬಾರಿಗೆ 04.00 ಗಂಟೆಗೆ ಮಾರುತಿ ಸರ್ಕಲನಲ್ಲಿ ಬೇಟಿ ಆಗಿರುತ್ತಾರೆ. 04.10 ನಿಮಿಷದವರೆಗೆ ಮಾರುತಿ ಸರ್ಕಲನಲ್ಲಿ ಇದ್ದೇವು. ಮಾರುತಿ ಸರ್ಕಲಗೂ ಮತ್ತು ಎಸ್ ಬಿ ಎಮ್ ಬ್ಯಾಂಕಗೂ ಅರ್ಧ ಕಿ.ಮೀ. ಅಂತರ ಆಗುತ್ತದೆ ಎಂದರೆ ಸರಿ. ಬಸ್ಸ ನಿಲ್ದಾಣದ ಒಳಗಡೆ ಹೋಗಿ ನಂತರ ಕನಕದಾಸ ಸರ್ಕಲ ಹತ್ತಿರ ಹೋಗಿ ನಂತರ ಎಸ್ ಬಿ ಎಮ್ ಬ್ಯಾಂಕ ಕಡೆಗೆ ಹೋಗಿರುತ್ತೇವೆ. ನಾವು ಮತ್ತು ಚಾಸಾ 1 ರವರು ಒಟ್ಟಿಗೆ ಹೋಗಿರುತ್ತೇವೆ. ಮಾರುತಿ ಸರ್ಕಲನಿಂದ ಬಸ್ ನಿಲ್ದಾಣಕ್ಕೆ ಹೋಗಬೇಕಾದರೆ ಎಸ್ ಬಿ ಐ ಬ್ಯಾಂಕ ಮುಂದೆ ಹಾದು ಹೋಗಬೇಕು ಎಂದರೆ ಸರಿ. ನಾವು ಎಸ್ ಬಿ ಐ ಬ್ಯಾಂಕ್ ಕಡೆ ನೋಡಿಕೊಂಡೆ ಹೋಗಿರುತ್ತೇವೆ. ಬಸ್ಸ ನಿಲ್ದಾಣಕ್ಕೆ ಹೋಗುವಾಗ ಆರೋಪಿತರು ಎಸ್ ಬಿ ಐ ಬ್ಯಾಂಕ್ ಹತ್ತಿರ ಇದ್ದ ಬಗ್ಗೆ ನೋಡಿಲ್ಲ. ಬಸ್ಸ ನಿಲ್ದಾಣದಲ್ಲಿ ಸುಮಾರು 04.15 ರಿಂದ 04.25 ರವರೆಗೆ ಇದ್ದೇವು. ಆರೋಪಿತರ ಬಗ್ಗೆ ಚಾಸಾ 1 ರವರಿಗೆ ಯಾರು ಇನಫಾರಂ ಮಾಡಿರುವುದಿಲ್ಲ.

6. ಸಾಮಾನ್ಯವಾಗಿ 04.30 ಗಂಟೆ ಸುಮಾರಿಗೆ ಜನರು ಎಸ್ ಬಿ ಎಮ್ ಬ್ಯಾಂಕನ ಮುಂದೆ ಕೊಪ್ಪಳ ರಸ್ತೆಯಲ್ಲಿ ವಾಕಿಂಗ್ ಹೋಗುತ್ತಾರೆ ಎಂದರೆ ಸರಿ. ಚಾಸಾ 1 ರವರು ಸಹ ಎಸ್ ಬಿ ಎಮ್ ಬ್ಯಾಂಕ್ ಹತ್ತಿರ ಬಂದಿರುತ್ತಾರೆ. ಎಸ್ ಬಿ ಎಮ್ ಬ್ಯಾಂಕ್ ಪಶ್ಚಿಮ ಭಾಗಕ್ಕೆ ಮುಖ ಮಾಡಿ ಇದೆ. ಆರೋಪಿತರ ಉತ್ತರ ಭಾಗದ ಕಡೆ ಇದ್ದರು. ಎಲ್ಲಾ ಆರೋಪಿತರು ಕೂಡಿಯೇ ಇದ್ದರು. ಎಸ್ ಬಿ ಎಮ್ ಬ್ಯಾಂಕ್ 2017 ರಲ್ಲಿ ಕನಕದಾಸ ಸರ್ಕಲ್ ಹತ್ತಿರ ಇತ್ತು. ಅಲ್ಲಿ ಸಾಕಷ್ಟು ಬಯಲು ಪ್ರದೇಶ ಇರುವುದರಿಂದ ಅಡಗಿಕೊಳ್ಳಲು ಯಾವುದೇ ಸ್ಥಳ ಇಲ್ಲ ಎಂದರೆ ಸಾಕ್ಷಿಯು ಮೆಟ್ಟಿಲುಗಳು ಇವೆ ಎಂದು ನುಡಿಯುತ್ತಾರೆ. ಎಷ್ಟು ಮೆಟ್ಟಿಲು ಇವೆ ಮತ್ತು ಅಂತರ ಇವೆ ಎಂದು ಹೇಳಲು ಆಗುವುದಿಲ್ಲ. ಮೆಟ್ಟಿಲು ಕೆಳಭಾಗದಲ್ಲಿ ಅಡಗಿಕೊಳ್ಳಲು ಪ್ರಯತ್ನಿಸಿರುತ್ತಾರೆ. ಯಾವ ಭಾಗದ ಕಡೆ ಎಂದು ಹೇಳಲು ಬರುವುದಿಲ್ಲ. ನಾನು ಫಕೀರಪ್ಪನನ್ನು ಹಿಡಿದುಕೊಂಡಿರುತ್ತೇನೆ. ಚಾಸಾ 5 ರವರು ಈರಪ್ಪನನ್ನು ಹಿಡಿದುಕೊಂಡಿರುತ್ತಾರೆ. ಆರೋಪಿತರನ್ನು ಹಿಡಿದಾಗ ಅಲ್ಲಿ ಯಾರು ಜನರು ಸೇರಿರಲಿಲ್ಲ.

7. ಮು.ಮಾ. 1 ಮತ್ತು 2 ರಂತಹವು ಕಬ್ಬಿಣದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಯಾವ ಆರೋಪಿಯ ಹತ್ತಿರ ಅವುಗಳು ಇದ್ದವು ಎಂದು ಹೇಳಲು ಆಗುವುದಿಲ್ಲ. ಎಸ್ ಬಿ ಎಮ್ ಬ್ಯಾಂಕ್ ಹತ್ತಿರ 04.30 ರಿಂದ 05.30 ಗಂಟೆಯವರೆಗೆ ಇದ್ದೆವು. ನಾವು ಠಾಣೆಗೆ 06.00 ಗಂಟೆಗೆ ಹೋಗಿರುತ್ತೇವೆ. ಎಸ್ ಬಿ ಎಮ್ ಬ್ಯಾಂಕನಿಂದ ಠಾಣೆಗೆ 10 ರಿಂದ 15 ನಿಮಿಷದಲ್ಲಿ ಹೋಗಬಹುದು. ನನ್ನ ಹೇಳಿಕೆಯನ್ನು 06.15 ರಿಂದ 06.45 ಗಂಟೆಯವರೆಗೆ ಹೇಳಿಕೆ ಪಡೆದಿರುತ್ತಾರೆ. ನಾನು ಚಾಸಾ 1 ರವರ ಜೊತೆ ಗಸ್ತು ಮಾಡುವಾಗ ಆರೋಪಿತರು ಅನುಮಾನಾಸ್ಪಾದವಾಗಿ ಅಡಗಿಕೊಳ್ಳುತ್ತಿದ್ದರು ಹಾಗೂ ಅವರಿಂದ ಮು.ಮಾ. 1 ಮತ್ತು 2 ಅನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. 1 ಮತ್ತು 2 ಕ್ಕೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಠಾಣಾ ಅಂಕಿ ಸಂಖ್ಯೆಗಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** 2 ನೇ ಆರೋಪಿ ಪರ ಶ್ರೀ ಸಿ ಪಿ ಪಿ ವಕೀಲರು ಸದರಿ ಪಾಟೀಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**